ಮೈಸೂರು ನಗರದ ಗಂಧದ ಎಣ್ಣೆಯ ಕಾರ್ಖಾನೆಯ ಆರ್ಥಿಕ ಪರಿಸ್ಥಿತಿ ಕುರಿತು

1523: ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ):– ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮೈಸೂರು ನಗರದ ಗಂಧದ ಎಣ್ಣೆ ಕಾರ್ಖಾನೆ ಆರ್ಥಿಕವಾಗಿ ಯಾವ ಪರಿಸ್ಥಿತಿಯಲ್ಲಿದೆ;

ಆ. ಇದನ್ನು ಅಭಿವೃದ್ಧಿಪಡಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):–

ಅ. ಈ ಘಟಕ ನಷ್ಟದಲ್ಲಿ ನಡೆಯುತ್ತಿದೆ.

ಆ. ಈ ಘಟಕ ಸೇರಿದಂತೆ ಕೆ.ಎಸ್.ಅಂಡ್ ಡಿ.ಎಲ್. ಕಂಪನಿಯನ್ನು ಪುನರುಜ್ಜೀಕರಣ ಮಾಡಲು ಸರ್ಕಾರ ಅನುಮೋದನೆ ನೀಡಿದೆ ಮತ್ತು ರೂ.2.50 ಕೋಟಿ ರೂ. ಇದುವರೆಗೆ ಬಿಡುಗಡೆ ಮಾಡಿದೆ. ಅಲ್ಲದೆ ಮೈಸೂರು ಮತ್ತು ಶಿವಮೊಗ್ಗದಲ್ಲಿರುವ ಗಂಧದ ಎಣ್ಣೆ ಕಾರ್ಖಾನೆಗಳನ್ನು ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮಕ್ಕೆ ವರ್ಗಾಯಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಕೇಂದ್ರ ಸರ್ಕಾರದಿಂದ ಇತ್ತೀಚಿನ ವರ್ಷಗಳಲ್ಲಿ ರಾಜ್ಯಕ್ಕೆ ಮಂಜೂರಾದ ಹೊಸ ಕೈಗಾರಿಕೆಗಳ ಸಂಖ್ಯೆ ಕುರಿತು

1524: ಶ್ರೀ ಕೆ. ಹರ್ಷಕುಮಾರಗೌಡ (ಚಾಮರಾಜ):– ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕೇಂದ್ರ ಸರ್ಕಾರದಿಂದ ಇತ್ತೀಚಿನ ವರ್ಷಗಳಲ್ಲಿ ರಾಜ್ಯಕ್ಕೆ ಹೊಸದಾಗಿ ಮಂಜೂರಾಗಿರುವ ಕೈಗಾರಿಕೆಗಳೆಷ್ಟು ? ಅವುಗಳು ಯಾವುವು;

ಆ. ರಾಜ್ಯದಲ್ಲಿ ಈ ಕೈಗಾರಿಕೆಗಳನ್ನು ಮಂಜೂರು ಮಾಡಲಾಗಿರುವ ಜಿಲ್ಲೆಗಳಾವುವು ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):–

ಅ. ಯಾವುದು ಇಲ್ಲ.

ಆ. ಉದ್ಭವಿಸುವುದಿಲ್ಲ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಲಿಯಲ್ಲಿನ ಕಾರ್ಯದರ್ಶಿಯ ಹುದ್ದೆ ಕುರಿತು

180: ಶ್ರೀ ಕೆ.ಲಕ್ಕಣ್ಣ (ರಾಜಾಜಿನಗರ):– ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ಕಾರ್ಯದರ್ಶಿಯ ಹುದ್ದೆ ಯಾವ ಅರ್ಹತೆಯನ್ನು ಒಳಗೊಂಡಿರುವುದು;

ಆ. ಆ ಕಾರ್ಯದರ್ಶಿಯ ಹುದ್ದೆಯನ್ನು ಯಾವ ದಿನಾಂಕದಿಂದ ಮಂಜೂರು ಮಾಡಲಾಗಿದೆ;

ಇ. ಆ ದಿವಸದಿಂದ ಇಂದಿನವರೆಗೆ ಎಷ್ಟು ಜನ ಕಾರ್ಯದರ್ಶಿ ಹುದ್ದೆಯಲ್ಲಿ ಸೇವೆ ಮಾಡಿರುವರು;

ಈ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಈಗಿನ ಕಾರ್ಯದರ್ಶಿಯವರು ನಿಯಮ ಪ್ರಕಾರ ಇರುವರೇ ?

ಶ್ರೀಮತಿ ನಾಗಮ್ಮ ಸಿ.ಕೇಶವಮೂರ್ತಿ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):–

ಅ. ದಿನಾಂಕ:15.01.1984ರಲ್ಲಿ ಜಾರಿಗೆ ಬಂದ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ದರ್ಜೆ ಮತ್ತು ನೇಮಕಾತಿ ನಿಯಮಗಳಲ್ಲಿ ಸೂಚಿಸಿರುವಂತೆ ಕಾರ್ಯದರ್ಶಿ ಹುದ್ದೆಯು ಈ ಕೆಳಗಿನ ಅರ್ಹತೆಯನ್ನು ಒಳಗೊಂಡಿರುತ್ತದೆ.

1. ನೇರ ನೇಮಕಾತಿ:

ಅ. ಆಂಗೀಕೃತ ವಿಶ್ವವಿದ್ಯಾನಿಲಯದಿಂದ ಕಲೆ ವಿಜ್ಞಾನ ಅಥವಾ ಕಾನೂನು ವಿಭಾಗದಲ್ಲಿ ಪ್ರಥಮ ದರ್ಜೆಯ ಪದವೀಧರರಾಗಿರಬೇಕು.

ಆ. ಕಂಪನಿ ಸೆಕ್ರೆಟೀರಿಯೇಸ್ ಸಂಸ್ಥೆಯ ಸದಸ್ಯರಾಗಿರಬೇಕು ಅಥವಾ ತತ್ಸಮಾನ ಹುದ್ದೆಯನ್ನು ಹೊಂದಿದವರಾಗಿರಬೇಕು. ಅದಲ್ಲದೆ, ಸರ್ಕಾರಿ ಅಥವಾ ವಾಣಿಜ್ಯ ಸಂಸ್ಥೆಗಳಲ್ಲಿ ಕನಿಷ್ಟ 5 ವರ್ಷದ ಅನುಭವವಿರಬೇಕು.

ಇ. ವಯಸ್ಸು 40 ವರ್ಷ ಮೀರಿರಬಾರದು.

2. ಪದೋನ್ನತಿ:

ಸಹಾಯಕ ಕಾರ್ಯದರ್ಶಿ ಹುದ್ದೆಯಲ್ಲಿ ಕನಿಷ್ಟ 4 ವರ್ಷ ಸೇವೆ ಸಲ್ಲಿಸಿರಬೇಕು.

ಆ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ಕಾರ್ಯದರ್ಶಿ ಹುದ್ದೆಯು ದಿನಾಂಕ:14.07.1966ರಿಂದ ಮಂಜೂರು ಮಾಡಲಾಗಿದೆ.

ಇ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ಬೇರೆ ಇಲಾಖೆಯ 4 ಮಂದಿ ಅಧಿಕಾರಿಗಳು ಕಾರ್ಯದರ್ಶಿಯಾಗಿ ಎರವಲು ಸೇವೆಯಲ್ಲಿ ಕೆಲಸ ಮಾಡಿರುವರು.

ಈಗಿರುವ ಕಾರ್ಯದರ್ಶಿಯವರು ದಿ: 23.09.1981ರಿಂದ 03.10.1988ರವರೆಗೆ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸಿದ್ದು, ಮಂಡಳಿಯ ಸಹಾಯಕ ಕಾರ್ಯದರ್ಶಿಯೊಬ್ಬರು ಸಲ್ಲಿಸಿದ್ದ ರಿಟ್ ಅರ್ಜಿಯ ಮೇಲೆ ಅವರನ್ನು ಸಹಾಯಕ ಕಾರ್ಯದರ್ಶಿ ಸ್ಥಾನಕ್ಕೆ ದಿ: 04.10.1988ರಿಂದ ಹಿಂಬಡ್ತಿ ನೀಡಲಾಯಿತು.

ನಂತರ ಉಚ್ಚನ್ಯಾಯಾಲಯದ ಅನುಮತಿಯನ್ನು ಪಡೆದು ಸಹಾಯಕ ಕಾರ್ಯದರ್ಶಿಗಳಲ್ಲಿ ಆಯ್ಕೆಯನ್ನು ನಡೆಸಿ ಈಗ ಕೆಲಸ ಮಾಡುತ್ತಿರುವ ಕಾರ್ಯದರ್ಶಿಯವರನ್ನು ಈ ಸ್ಥಾನಕ್ಕೆ ಆಯ್ಕೆ ಮೇಲೆ ದಿನಾಂಕ 13.03.1990 ರಿಂದ ಮುಂಬಡ್ತಿ ನೀಡಲಾಯಿತು.

ಈ. ನಿಯಮಾವಳಿ ಪ್ರಕಾರ ಈಗಿನ ಕಾರ್ಯದರ್ಶಿಯವರಿಗೆ ಸಹಾಯಕ ಕಾರ್ಯದರ್ಶಿಯ ಹುದ್ದೆಯಿಂದ ಬಡ್ತಿ ನೀಡಿ ನೇಮಕ ಮಾಡಿಲಾಗಿದೆ.